: ಸದನವು 1-10ಕ್ಕೆ ಸಮಾವೇಶಗೊಂಡಿತು :

ಶ್ರೀ ರಮೇಶ್‌ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಹಕ್ಕುಚ್ಯುತಿ ಪ್ರಸ್ತಾವ

(ಅ) ಶಾಸಕರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ತಮ್ಮ ಕ್ಷೇತ್ರದ ಕೆಲಸವನ್ನು ನಿರ್ವಹಿಸುವಲ್ಲಿ ಕಂದಾಯ ಮಂತ್ರಿಗಳಾದ ಶ್ರೀ ಸೋಮಶೇಖರ್‌ರವರು ಅಡ್ಡಿಪಡಿಸುತ್ತಿರುವುದು.

(ಮುಂದುವರೆದ ಚರ್ಚೆ)

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಈ ಸದನವು ಮುಂದೂಡುವುದಕ್ಕೂ ಮೊದಲು ಶ್ರೀ ಶ್ರೀರಾಮರೆಡ್ಡಿಯವರು ಎತ್ತಿರುವ ವಿಚಾರದ ಬಗ್ಗೆ ಏನೆಲ್ಲಾ ಚರ್ಚೆಯಾಯಿತು ಅದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ. ಈಗ ಸಭಾನಾಯಕರೇ ಇಲ್ಲಿರುವುದರಿಂದ ಅದರ ಬಗ್ಗೆ ಸ್ಪಷ್ಟೀಕರಣ ನೀಡಿದರೆ ಶ್ರೀ ಶ್ರೀರಾಮರೆಡ್ಡಿಯವರಿಗೆ ಅನುವುಮಾಡಿಕೊಟ್ಟಂತೆ ಆಗುತ್ತದೆ. ದಯವಿಟ್ಟು ಮುಖ್ಯಮಂತ್ರಿಗಳೇ ಸ್ಪಷ್ಟೀಕರಣ ನೀಡಬೇಕು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಡೆದ ವಿಷಯಗಳೆಲ್ಲವನ್ನು ತಿಳಿದುಕೊಂಡೆ. ನಾನು ಇದ್ದಿದ್ದರೆ ಇದು ಆಗುತ್ತಿರಲಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರ ಕ್ಷೇತ್ರಕ್ಕೆ ಬೇಕಾಗಿರುವ ಮಿನಿ ವಿಧಾನಸೌಧದ ಕಟ್ಟಡವನ್ನು ನಾನು ಈಗಾಗಲೇ ಮಂಜೂರು ಮಾಡಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಆಜ್ಞೆ ಮಾಡಿದ್ದೇನೆ. ಅದರ ಪ್ರತಿ ತಮಗೆ ಇನ್ನು ತಲುಪಿಲ್ಲ. ಆದ್ದರಿಂದ ಆ ವಿಚಾರದ ಬಗ್ಗೆ ಹೆಚ್ಚಿನ ಪ್ರಸ್ತಾಪ ಈ ಸದನದಲ್ಲಿ ಅವಶ್ಯಕತೆ ಇಲ್ಲ. ತಾವು ತಮ್ಮ motion in whatever form, you please with-draw it. I request you to allow him to withdraw, it.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರ ಕ್ಷೇತ್ರದಲ್ಲಿ ಮಿನಿ ವಿಧಾನಸೌಧದ ಕಟ್ಟಡವನ್ನು ಮಂಜೂರು ಮಾಡಬೇಕೆಂದು ಕಳೆದ ಐದು ತಿಂಗಳಿನಿಂದ ಏನು ಒತ್ತಾಯ ಮಾಡುತ್ತಿದ್ದರು, ಅದು ಆಗೇ ಆಗುತ್ತದೆ, ಅದಕ್ಕೆ ಸಂಬಂಧಪಟ್ಟಂತೆ ಆದೇಶ ಮಾಡಿದ್ದೇನೆ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ ಮೇಲೆ ಮಾನ್ಯ ಶ್ರೀರಾಮರೆಡ್ಡಿಯವರು ಮಂಡಿಸಿರುವ ಹಕ್ಕುಚ್ಯುತಿ ನಿರ್ಣಯವನ್ನು ವಾಪಸ್ ಪಡೆಯಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಭರವಸೆಯ ಹಿನ್ನಲೆಯಲ್ಲಿ ನಾನೇನು ಕಂದಾಯ ಸಚಿವರ ವಿರುದ್ಧ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿದ್ದೆ. ಅದನ್ನು ವಾಪಸ್ ಪಡೆಯುತ್ತಿದ್ದೇನೆ.

ಅಧ್ಯಕ್ಷರು : ಆ ಹಕ್ಕುಚ್ಯುತಿ ನಿರ್ಣಯವನ್ನು ಅವರು ಹಿಂದಕ್ಕೆ ಪಡೆದುಕೊಂಡಿದ್ದಾರೆ. ಇದರ ಬಗ್ಗೆ ಚರ್ಚೆಯಾಗತಕ್ಕ ವೇಳೆಯಲ್ಲಿ ಹಿಂದೆ ಇಂಥ ಒಂದು ಘಟನೆಯಾಗಿತ್ತು, ನಾನು ಪ್ರಸ್ತಾಪ ಮಾಡಿದ್ದೆ ಎಂದು ಅವರೇನು ಅಬ್ಸ್ರ್ವೇಷನ್ ಮಾಡಿದ್ದಾರೆ all these things will not form part of the proceedings. ದಯಮಾಡಿ ಪತ್ರಿಕೆಯವರಿಗೆ ಹೇಳುತ್ತಿದ್ದೇನೆ, ಪ್ಲೀಸ್ ಇದು ಪತ್ರಿಕೆಗಳಲ್ಲಿ

ಬರುವ ಅಗತ್ಯವಿಲ್ಲ. I have to be fair to the concerned Members. That will not form part of the proceedings.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಆದ್ದರಿಂದ ಮುಖ್ಯಮಂತ್ರಿಗಳು ಯಾವಾಗಲೂ ಸದನಕ್ಕೆ ಬರುತ್ತಿರಬೇಕು. ಆಗ ಈ ರೀತಿ ಘಟನೆಗಳು ಆಗುವುದಿಲ್ಲ. ತಾವು ತಡವಾಗಿ ಇಲ್ಲಿಗೆ ಬರುತ್ತೀರಿ, ಅಷ್ಟರಲ್ಲಿ ಈ ರೀತಿ ಘಟನೆಗಳು ಆಗುತ್ತದೆ, ಅನಂತರ ತಾವು ಬಂದು ಕ್ಷಮೆ ಕೇಳಿಕೊಂಡು ಕುಳಿತುಬಿಡುತ್ತೀರಿ.

ಅಧ್ಯಕ್ಷರು : ನಮ್ಮ ಹಣೆಬರಹ ಸರಿಯಾಗಿಲ್ಲದಿದ್ದರೆ ಪಾಪ ಅವರೇನು ಮಾಡುತ್ತಾರೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೆ, ನಾವೂ ಇದೇ ರೀತಿ ಮಾಡಿದರೆ ನಮಗೂ ಸಹ ವಿಧಾನಸೌಧ ಸಿಗುತ್ತದೆ ಎಂದು ಭಾವಿಸೋಣವೇ?;

ಅಧ್ಯಕ್ಷರು : ಮಾನ್ಯ ಸಿ.ಎಂ. ಲಿಂಗಪ್ಪನವರೇ, ತಾವು ಮಾತನಾಡಿ.

(ಆ) ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ಮಧ್ಯದಲ್ಲಿ ಅಡ್ಡಿಪಡಿಸಿದ ಸದಸ್ಯರ ಕುರಿತು

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಅಧ್ಯಕ್ಷರೆ, ಪ್ರಸ್ತುತ ಅಧಿವೇಶನದ ಮೊದಲನೆಯ ದಿವಸ ಅಂದರೆ 8-3-1999 ಮಧ್ಯಾಹ್ನ 12-15 ಕ್ಕೆ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ತಮ್ಮ ಭಾಷಣವನ್ನು ಮಾಡಬೇಕಾದ ಕಾರ್ಯಕ್ರಮ ನಿಗದಿಯಾಗಿತ್ತು. ಅಂದಿನ ಸಭೆಯಲ್ಲಿ ಮೇಲ್ಮನೆಯ ಸದಸ್ಯರುಗಳು ಸೇರಿ ಮುನ್ನೂರು ಜನ ಇದ್ದೆವು. ಅಂದು ರಾಜ್ಯಪಾಲರು ಇಲ್ಲಿಗೆ ಬಂದು ತಮ್ಮ ಭಾಷಣವನ್ನು ಓದಲು ಪ್ರಾರಂಭ ಮಾಡಿದ ಕೂಡಲೇ ಈ ಸದನದ ಹಿರಿಯರು ಮತ್ತು ಗೌರವಾನ್ವಿತ ಸದಸ್ಯರಾಗಿರುವಂಥ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಜುಲ್ಫಿಕರ್ ಹಷ್ಮಿರವರು ಎದ್ದು ತಮ್ಮದೇ ಆದ ಧಾಟಿಯಲ್ಲಿ ಗಲಾಟೆ ಮಾಡಿ ರಾಜ್ಯಪಾಲರು ತಮ್ಮ ಭಾಷಣವನ್ನು ಬಹಳ ಸ್ವಲ್ಪ ಸಮಯದಲ್ಲೇ ಮೊಟಕುಗೊಳಿಸಿ ಹೊರಗಡೆ ಹೋಗತಕ್ಕ ಸನ್ನಿವೇಶ ನಿರ್ಮಾಣ ಮಾಡಿದ್ದು ಮಾತ್ರವಲ್ಲ ರಾಜ್ಯಪಾಲರು ತಮ್ಮ ಭಾಷಣವನ್ನು ಪೂರ್ತಿ ಓದುತ್ತಾರೆ ಅದನ್ನು ಕೇಳಬೇಕು ಎಂದು ಕುತೂಹಲದಿಂದ ಕುಳಿತಿದ್ದಂಥ 298 ಸದಸ್ಯರ ಹಕ್ಕು ಏನಿತ್ತು ಅದು ಸಂಪೂರ್ಣವಾಗಿ ಚ್ಯುತಿಯಾಯಿತು. ಅಂದು ರಾಜ್ಯಪಾಲರು ತಮ್ಮ ಭಾಷಣವನ್ನು ನಿಜವಾಗಿಯೂ ಓದಿದರೇ ಎಂಬ ಮೂಲಭೂತ ಪ್ರಶ್ನೆ ಉದ್ಭವಿಸುತ್ತದೆ. ರಾಜ್ಯಪಾಲರು ತಮ್ಮ ಭಾಷಣವನ್ನು ಓದಿದ್ದರೂ if the copy of the Governor's speech is laid on the table of the House, it is presumed that he has read it. ಎಂದು ನಿಯಮ ಹೇಳುತ್ತದೆ. ಆದರೆ ನಾವು ಅಂದು ರಾಜ್ಯಪಾಲರು ಭಾಷಣವನ್ನು ಓದುತ್ತಾರೆ ಎಂಬ ಒಂದೇ ಒಂದು ಉದ್ದೇಶದಿಂದ ಇಲ್ಲಿಗೆ ಬಂದಿದ್ದೆವು. ಅಂದು ರಾಜ್ಯಪಾಲರಾಗಿರಲಿ ಅಥವಾ ಯಾವುದೇ ವ್ಯಕ್ತಿಯಾಗಿರಲಿ ಭಾಷಣವನ್ನು ಓದಲಾರದ ಸ್ಥಿತಿ ನಿರ್ಮಾಣವಾಗಿತ್ತು. ಆ ರೀತಿ ಗಲಾಟೆಯನ್ನು ಏಕೆ ಮಾಡುತ್ತಾರೆ ಎಂಬ ಪ್ರಶ್ನೆ ನಮಗೆಲ್ಲಾ ಬರುತ್ತದೆ. ಗಲಾಟೆ ಮಾಡುವವರ ಉದ್ದೇಶ ಏನೋ ಇರುತ್ತದೆ. ಆ ಉದ್ದೇಶವೇನು ಎಂಬುದು ನಮಗ್ಯಾರಿಗೂ ಅರ್ಥವಾಗಲಿಲ್ಲ. ಅವರ ಉದ್ದೇಶ ಸಾಧನೆಯಾಗಲೂ ಇಲ್ಲ, ಮುಂದೆ ಸಹ ಆಗುವುದಿಲ್ಲ. ಆ ರೀತಿ